ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	469
ಸದಸ್ಯರ ಹೆಸರು	:	ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	:	04.02.2021
ಉತ್ತರಿಸುವ ಸಚಿವರು	:	ಗೃಹ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಕೇಂದ್ರ ಸರ್ಕಾರದ ನಿರ್ಭಯ ಯೋಜನೆಯಡಿಯಲ್ಲಿ ರಾಜ್ಯಕ್ಕೆ ಮಂಜೂರಾಗಿರುವ ಅನುದಾನ ಎಷ್ಟು; ಹಾಗೂ ಬಿಡುಗಡೆಯಾಗಿರುವ ಅನುದಾನ ಎಷ್ಟು; (ವಿವರಗಳನ್ನು ನೀಡುವುದು)	ಕೇಂದ್ರ ಸರ್ಕಾರದ ನಿರ್ಭಯ ನಿಧಿ ಅಡಿ ಬೆಂಗಳೂರು ನಗರದಲ್ಲಿ ಸೇಫ್ ಸಿಟಿ ಪ್ರಾಜೆಕ್ಟ್ ಫಾರ್ ಸೇಫ್ಟಿ ಆಫ್ ವುಮೆನ್ ಯೋಜನೆಯ ಅನುಷ್ಠಾನ ಕುರಿತು **ಒಟ್ಟು ರೂ.667 ಕೋಟಿಗಳ** ಕ್ರಿಯಾ ಯೋಜನೆಗೆ ಅನುಮೋದನೆಯನ್ನು ನೀಡಲಾಗಿರುತ್ತದೆ. ಅದರಲ್ಲಿ ಕೇಂದ್ರ ಸರ್ಕಾರದ ಪಾಲು(60%) ರೂ.400.20 ಕೋಟಿಗಳು ಮತ್ತು ರಾಜ್ಯ ಸರ್ಕಾರದ ಪಾಲು(40%) ರೂ.266.80 ಕೋಟಿಗಳು ಮಂಜೂರಾಗಿರುತ್ತದೆ. 2019-20ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ರೂ.167.26 ಕೋಟಿಗಳು ಮತ್ತು ರಾಜ್ಯ ಸರ್ಕಾರದ ರೂ.111.50 ಕೋಟಿಗಳು ಸೇರಿದಂತೆ **ಒಟ್ಟು ರೂ.278.76 ಕೋಟಿಗಳ** ಅನುದಾನವನ್ನು ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 500 ಎಸ್‌ಎಸ್‌ಟಿ 2017; ದಿನಾಂಕ: 30.08.2019ರಲ್ಲಿ ಬಿಡುಗಡೆ ಮಾಡಲಾಗಿರುತ್ತದೆ.
(ಆ)	ಸದರಿ ಅನುದಾನದ "ಸೇಫ್ ಸಿಟಿ ಪ್ರಾಜೆಕ್ಟ್"ಗೆ ಸಂಬಂಧಿಸಿದಂತೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ಬೆಂಗಳೂರು ನಗರದಲ್ಲಿ ಸೇಫ್ ಸಿಟಿ ಪ್ರಾಜೆಕ್ಟ್ ಫಾರ್ ಸೇಫ್ಟಿ ಆಫ್ ವುಮೆನ್ ಅನ್ನು ಅನುಷ್ಠಾನಗೊಳಿಸಲು ಕೈಗೊಂಡಿರುವ ಕ್ರಮಗಳ ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ.
(ಇ)	ಸೇಫ್ ಸಿಟಿ ಪ್ರಾಜೆಕ್ಟ್ "ಇ-ಟೆಂಡರ್ ಕರೆಯಲಾಗಿದೆಯೇ; ಹಾಗಿದ್ದಲ್ಲಿ, ಟೆಂಡರ್‌ನಲ್ಲಿ ಭಾಗವಹಿಸಲು ಯಾವ ಯಾವ ನಿರ್ಬಂಧನೆಗಳನ್ನು ವಿಧಿಸಲಾಗಿತ್ತು; ಟೆಂಡರ್‌ನಲ್ಲಿ ಭಾಗವಹಿಸಿರುವ ಕಂಪನಿಗಳು ಯಾವುವು; ಅವುಗಳಲ್ಲಿ ಅರ್ಹವಾದ ಕಂಪನಿಗಳು ಯಾವುದು; ಯಾವ ಕಂಪನಿಗೆ ಟೆಂಡರ್ ಮಂಜೂರಾಗಿದೆ;	ಬೆಂಗಳೂರು ನಗರದಲ್ಲಿ ಸೇಫ್ ಸಿಟಿ ಪ್ರಾಜೆಕ್ಟ್ ಫಾರ್ ಸೇಫ್ಟಿ ಆಫ್ ವುಮೆನ್ ಅನ್ನು ಅನುಷ್ಠಾನಗೊಳಿಸಲು ದಿನಾಂಕ:11-11-2020 ರಂದು ಮೂರನೇ ಬಾರಿ ಟೆಂಡರ್ ಅನ್ನು ಇ-ಪೋರ್ಟಲ್‌ನಲ್ಲಿ ಆಹ್ವಾನಿಸಲಾಗಿರುತ್ತದೆ. ಸದರಿ ಟೆಂಡರ್ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ ಹಾಗೂ ಆಸಕ್ತಿಯುಳ್ಳ ಸಂಸ್ಥೆಯವರುಗಳು ಬಿಡ್ ಸಲ್ಲಿಸಲು ಕೊನೆಯ ದಿನಾಂಕ:12-02-2021 ರಂದು ನಿಗದಿಪಡಿಸಲಾಗಿರುತ್ತದೆ.
(ಈ)	ಟೆಂಡರ್ ಮಂಜೂರಾತಿಯ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಪೊಲೀಸ್ ಅಧಿಕಾರಿಗಳು ಟೀಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು?	ಸರ್ಕಾರದ ಪರಿಶೀಲನೆಯಲ್ಲಿದೆ.

ಹೆಚ್‌ಡಿ 80 ಎಸ್‌ಎಸ್‌ಟಿ 2021

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

ಅನುಬಂಧ

1. ಕೇಂದ್ರ ಸರ್ಕಾರದ ನಿರ್ಭಯ ನಿಧಿ ಅಡಿ ಬೆಂಗಳೂರು ನಗರದಲ್ಲಿ ಸೇಫ್ ಸಿಟಿ ಪ್ರಾಜೆಕ್ಟ್ ಫಾರ್ ಸೇಫ್ಟಿ ಆಫ್ ವುಮೆನ್ ಯೋಜನೆಯ ಅನುಷ್ಠಾನ ಕುರಿತು **ಒಟ್ಟು ರೂ.667 ಕೋಟಿಗಳ** ಕ್ರಿಯಾ ಯೋಜನೆಗೆ ಅನುಮೋದನೆಯನ್ನು ನೀಡಲಾಗಿರುತ್ತದೆ. ಅದರಲ್ಲಿ ಕೇಂದ್ರ ಸರ್ಕಾರದ ಪಾಲು(60%) ರೂ.400.20 ಕೋಟಿಗಳು ಮತ್ತು ರಾಜ್ಯ ಸರ್ಕಾರದ ಪಾಲು(40%) ರೂ.266.80 ಕೋಟಿಗಳು ಮಂಜೂರಾಗಿರುತ್ತದೆ.

2. ಸದರಿ ಯೋಜನೆಯನ್ನು ಬೆಂಗಳೂರು ನಗರದಲ್ಲಿ ಪೊಲೀಸ್ ಆಯುಕ್ತರು, ಬೆಂಗಳೂರು ನಗರ ಇವರು ಅನುಷ್ಠಾನಗೊಳಿಸುವ ಪ್ರಾಧಿಕಾರವಾಗಿರುತ್ತಾರೆ.

3. ಈ ಅನುದಾನವನ್ನು ರಾಜ್ಯದ ಮಹಿಳಾ ಸುರಕ್ಷತೆ ಮತ್ತು ಭದ್ರತೆ ಕಾರ್ಯಕ್ರಮಗಳಿಗೆ ಬೆಂಗಳೂರು ನಗರದಲ್ಲಿ ಸೇಫ್ ಸಿಟಿ ಪ್ರಾಜೆಕ್ಟ್ ಫಾರ್ ಸೇಫ್ಟಿ ಆಫ್ ವುಮೆನ್ ಅನ್ನು ಅನುಷ್ಠಾನಗೊಳಿಸಲು 2019-20ನೇ ಸಾಲಿನಲ್ಲಿ ಒಟ್ಟು ರೂ.208.05 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

4. ಈ ಯೋಜನೆಯ ಯೋಜನಾ ಮೇಲ್ವಿಚಾರಣಾ ಸಮಾಲೋಚಕರಾಗಿ (Project Monitoring Consultants (PMC) M/s Ernst & Young LLP ಸಂಸ್ಥೆಯನ್ನು ಆಯ್ಕೆ ಮಾಡಿದ್ದು, ಇವರಿಗೆ ರೂ.0.72 ಕೋಟಿಗಳನ್ನು ಯೋಜನಾ ಮೇಲ್ವಿಚಾರಣಾ ಸಮಾಲೋಚಕರ ಕಾರ್ಯನಿರ್ವಹಣೆಗೆ ಪಾವತಿಸಲಾಗಿರುತ್ತದೆ.

5. ಸದರಿ ಸಂಸ್ಥೆಯವರು ತಯಾರಿಸಿದ RFP(Request for Proposal) ರನ್ವಯ 02 ಬಾರಿ ಟೆಂಡರ್ ಆಹ್ವಾನಿಸಲಾಗಿದ್ದು, ಯಾವುದೇ ಬಿಡ್‌ದಾರರು ಅರ್ಹರಿಲ್ಲದ ಕಾರಣದಿಂದಾಗಿ ಹಾಗೂ ಕೇಂದ್ರ ಸರ್ಕಾರದ ಆದೇಶದನ್ವಯ ಚೀನಾ ದೇಶದ ಉತ್ಪನ್ನಗಳ ಮೇಲೆ ನಿರ್ಬಂಧವಿದ್ದ ಕಾರಣ ಎರಡೂ ಟೆಂಡರ್ ಪ್ರಕ್ರಿಯೆಯು ರದ್ದುಗೊಂಡಿರುತ್ತದೆ. ಪ್ರಸ್ತುತ 3ನೇ ಬಾರಿಗೆ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

6. CCTV Surveillance System with GIS based crime mapping and Safety Islands ಅನುಷ್ಠಾನಗೊಳಿಸಲು ಮೂರನೇ ಬಾರಿ ಟೆಂಡರ್ ಅನ್ನು ದಿನಾಂಕ:11-11-2020 ರಂದು ಇ-ಪೋರ್ಟಲ್‌ನಲ್ಲಿ ಅಹ್ವಾನಿಸಲಾಗಿರುತ್ತದೆ.

7. ಬೆಂಗಳೂರು ನಗರದ ಒಟ್ಟು 08 ಕಾನೂನು & ಸುವ್ಯವಸ್ಥೆ ವಿಭಾಗಗಳಲ್ಲಿ Critical Care Response Units (CCRU) ಅನ್ನು ಸ್ಥಾಪಿಸಲು ಆಸ್ಪತ್ರೆಗಳನ್ನು ಗುರುತಿಸಲಾಗಿರುತ್ತದೆ (ವಿವರ ಈ ಕೆಳಕಾಣಿಸಿದಂತ್ತಿರುತ್ತದೆ) ಹಾಗೂ ಸದರಿ ಆಸ್ಪತ್ರೆಗಳೊಂದಿಗೆ ಎಂ.ಓ.ಯು. ಅನ್ನು ಮಾಡಿಕೊಳ್ಳುವ ಕಾರ್ಯವು ಪ್ರಗತಿಯಲ್ಲಿರುತ್ತದೆ.

Division	Name of the Hospital
West	ESI Hospital, Rajajinagar
South	Victoria Hospital
North	K.C. General Hospital
East	Bowring Hospital
Central	Vani Vilas Hospital
Whitefield	C.V. Raman Hospital
South East	Jayanagar General Hospital
North East	Yelahanka Govt. Hospital

8. ಸಿವಿಲ್ ಡಿಫೆನ್ಸ್‌ನಿಂದ ಸಿಬ್ಬಂದಿಯವರುಗಳನ್ನು ಆಯ್ಕೆ ಮಾಡಿ ಅಗತ್ಯ ತರಬೇತಿಯನ್ನು ನೀಡಿ ದಿನಾಂಕ:21/01/2021 ರಂದು ಒಟ್ಟು 26 ಪೊಲೀಸ್ ಠಾಣೆಗಳಲ್ಲಿ ಮಹಿಳಾ ಹೆಲ್ಪ್ ಡೆಸ್ಕ್‌ನಲ್ಲಿ ಕಾರ್ಯ ನಿರ್ವಹಿಸಲು ನಿಯೋಜಿಸಲಾಗಿರುತ್ತದೆ ಹಾಗೂ ಬಾಕಿ ಉಳಿದಿರುವ 84 ಪೊಲೀಸ್ ಠಾಣೆಗಳಲ್ಲಿ ಸಿಬ್ಬಂದಿಯವರುಗಳನ್ನು ತರಬೇತಿ ಹಾಗೂ ನಿಯೋಜಿಸುವ ಕಾರ್ಯವು ಪ್ರಗತಿಯಲ್ಲಿರುತ್ತದೆ.

9. ಮೇಲೆ ನಮೂದಿಸಿರುವ ಅಂಶಗಳನ್ನು ಹೊರತುಪಡಿಸಿ, ಇತರೆ ಅಂಶಗಳಾದ Integrated Support Centre for Women and Children, Command and Control Centre, Women Police Outposts ಹಾಗೂ ಇತ್ಯಾದಿ ಅಂಶಗಳು ಅಂತಿಮಗೊಳಿಸುವ ಪ್ರಕ್ರಿಯೆಯಲ್ಲಿ ಇರುತ್ತದೆ.

* * * *